# ಪ್ರಪಂಚದ ಪುಟ್ಟ ಪಪ್ಪಿ!



ಈ ಚಿತ್ರದಲ್ಲಿರುವ ನಾಯಿ ಮರಿಯನ್ನೊಮ್ಮೆ ನೋಡಿ. ಪ್ರಪಂಚದ ಪುಟ್ಟ ಪಪ್ಪಿ ಎಂಬ ಹೆಗ್ಗಳಿಕೆ ಪಡೆದಿರುವ ಇದು ಚಹಾದ ಕಪ್ಪಿನಲ್ಲಿ ಅದೆಷ್ಟು ಆರಾಮಾಗಿ ಕುಳಿತಿದೆ. ಸೂಸಾನ್ ಮತ್ತು ಆರ್ಕೀ ಥಾಮ್ಸನ್ ಅವರ ಕಣ್ಗಾವಲಿನಲ್ಲಿ ಬೆಳೆದ ಇದರ ಹೆಸರು ಟಾಮ್ ಥಂಬ್.

ಕೇವಲ ಮೂರು ಔನ್ಸ್ ತೂಕ ಹೊಂದಿರುವ ಇದು ಮೂಗಿನ ತುದಿಯಿಂದ ಬಾಲದ ಕೊನೆಯವರೆಗೂ ನಾಲ್ಕು ಅಂಗುಲದಷ್ಟು ಉದ್ದವಿದೆ. ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎಂಬಂತೆ ಜಾಗತಿಕ ದಾಖಲೆಗೂ ಅರ್ಹವಾಗಿದೆ.

ಇದರ ಸಹೋದರ, ಸಹೋದರಿಯರು ಇದಕ್ಕಿಂತ ಮೂರು ಪಟ್ಟು ಹೆಚ್ಚು ಎತ್ತರ ಮತ್ತು ತೂಕ ಹೊಂದಿವೆ. ಟಾಮ್ ಥಂಬ್ ಮಾತ್ರ ಇಷ್ಟು ಚಿಕ್ಕ ಆಕಾರ ಪಡೆದಿದೆ. ಇದರ ಈ ಗಾತ್ರದಿಂದ ತಾಯಿ ಎದ್ದು ನಿಂತರೆ ಇದಕ್ಕೆ ಹಾಲು ಕುಡಿಯಲು ಸಾಧ್ಯವೇ ಆಗುತ್ತಿರಲಿಲ್ಲವಂತೆ.

ಇದರ ಗಾತ್ರ ನೋಡಿ ಮೊದಲು ಮಾಲೀಕರಿಗೆ ಭಯವಾಗಿತ್ತಂತೆ, ಆದರೆ ಈಗ ಪೂರ್ಣ ಬೆಳವಣಿಗೆಯ ನಂತರ ಆರೋಗ್ಯವಾಗಿರುವುದನ್ನು ಕಂಡು ಸಂತಸವಾಗಿದೆ ಎನ್ನುತ್ತಾರೆ. ಇದು ಚಿಹುವಾಹುವಾ ತಳಿಯ ನಾಯಿ, ಇಲ್ಲಿಯವರೆಗೂ ಆರು ಚಿಹುವಾಹುವಾ ನಾಯಿಯನ್ನು ಸಾಕಿದ್ದರೂ ಇಷ್ಟು ಚಿಕ್ಕ ಮರಿಯನ್ನು ಇವರು ಕಂಡಿರಲಿಲ್ಲವಂತೆ.

ಅಂದ ಹಾಗೆ ಈ ಪುಟ್ಟ ಪುಟಾಣಿ ಪ್ರಾಣಿಪ್ರಿಯರ ಗಮನ ಸೆಳೆಯುತ್ತಿದೆ. ಸಾಕಿದವರ ಸಂಭ್ರಮವಂತೂ ಮುಗಿಲು ಮುಟ್ಟಿದೆ.

■ ಡಾ.ಅಮೀರುದ್ದೀನ್ ಖಾಜಿ

